# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ**110/2017**
ಪಿ.ಡಬ್ಲ್ಯೂಃ**2** , ಶಿವಶರಣಪ್ಪ

ದಿನಾಂಕ :**28-02-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ ಎಸ್ ಎಸ ಎ ವಕೀಲರಿಂದ

ಸದರಿ ಗುಂಡಮ್ಮಾ ಇವರು ಬರೆಸಿದ ಮೃತ್ಯು ಪತ್ರ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದು ದಿನಾಂಕ -21.07.1997 ರಲ್ಲಿ ಆದ ನೊಂದಾಯಿತ ಮೃತ್ಯು ಪತ್ರದ ಮೂಲಪ್ರತಿಯಾಗಿದ್ದು ಅದು ಈಗಾಗಲೇ ನಿಪಿ1 ಎಂದು ಗುರುತಿಸಲ್ಪಟ್ಟಿದೆ. ಅದರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಗುಂಡಮ್ಮ ಹೆಬ್ಬೆಟ್ಟು ಒತ್ತಿರುತ್ತಾರೆ. ಸಾಕ್ಷಿದಾರರಾಗಿ ಮಡಿಯಪ್ಪ, ಮಹೇಶ ಸಹಿ ಮಾಡಿದ್ದು ಭಿಮಯ್ಯ ಹೆಬ್ಬೆಟ್ಟು ಹಾಕಿರುತ್ತಾರೆ. ಅದೇ ರೀತಿ ಸಾಕ್ಷಿ ದಿನಾಂಕ-21.07.1997 ರಲ್ಲಿ ಗುಂಡಮ್ಮಾ ಇವರು ವೆಂಕಟರಮಣ ದೇವಸ್ಥಾನದ ಪೂಜಾರಿಗೆ ಬರೆದುಕೊಟ್ಟ ಕ್ರಯ ಪತ್ರ ಎಂದು ಅದರ ದೃಢಿಕೃತ ನಕಲನ್ನು ಗುರುತಿಸಿದ್ದು ಅದನ್ನು ತಾನೇ ತಯಾರಿಸಿದ್ದಾಗಿ ಸಹಿ ಸಹ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-20 ಎಂದು ಗುರುತಿಸಲಾಯಿತು.

ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.